ISSN : 0974-0066

84

Vol-84 No. 01,
July – December: 2023

# मध्य भारती

मानविकी एवं समाजविज्ञान की द्विभाषी शोध-पत्रिका

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-58210

**सम्पादकीय परामर्श मण्डल**

- प्रो. आनंद प्रकाश त्रिपाठी
- प्रो. अशोक अहिरवार
- प्रो. दिवाकर सिंह राजपूत
- प्रो. डी.के. नेमा
- प्रो. नागेश दुबे
- प्रो. अनुपमा कौशिक

# मध्य भारती

**मानविकी एवं समाजविज्ञान की द्विभाषी शोध-पत्रिका**

ISSN 0974-0066 (पूर्व-समीक्षित अर्द्धवार्षिक शोध-पत्रिका)
डॉक्टर हरीसिंह गौर विश्वविद्यालय, सागर (म.प्र.)
UGC Care List, Group-C (Multi disciplinary), Sl.no.-15

*प्रकाशित रचनाओं के अभिमत से डॉक्टर हरीसिंह गौर विश्वविद्यालय, सागर या सम्पादकों की सहमति अनिवार्य नहीं है, तथा यहाँ प्रकाशित आलेखों 'प्लेजिरिज्म' (Plagiarism) सम्बन्धी शुचिता की जिम्मेदारी लेखकों की है।*

**सम्पादकीय पत्र व्यवहार :**
मध्य भारती
डॉक्टर हरीसिंह गौर विश्वविद्यालय
सागर - 470003 (म.प्र.)

*आवरण :* डॉ. छबिल कुमार मेहेर

**मुद्रण :**
अमन प्रकाशन
कटरा नमक मंडी, सागर (म.प्र.)

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

# मध्य भारती

**मानविकी एवं समाजविज्ञान की द्विभाषी शोध-पत्रिका**
ISSN 0974-0066
UGC Care List, Group-C (Multi disciplinary), Sl.no.-15

**विशेषांक**
राष्ट्रीय शिक्षा नीति-2020 : परिप्रेक्ष्य और परिवर्त्य

**संरक्षक**
प्रो. नीलिमा गुप्ता
कुलपति

**प्रधान सम्पादक**
प्रो. अम्बिकादत्त शर्मा

**सम्पादक**
प्रो. भवतोष इन्द्रगुरू
प्रो. ब्रजेश कुमार श्रीवास्तव
डॉ. आशुतोष कुमार मिश्र

**अतिथि सम्पादक**
डॉ. संजय शर्मा

**प्रबन्ध सम्पादक**
डॉ. छबिल कुमार मेहेर

**डॉक्टर हरीसिंह गौर विश्वविद्यालय**
सागर (मध्यप्रदेश) - 470003

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

ಎಲ್ಲಾ ಅಧಿಕಾರಗಳನ್ನು ಹೊಂದಿ, ಅನೇಕ ಸಾಮಾಜಿಕ ನಿರ್ಬಂಧಗಳನ್ನು ಹೇರುವ ಮೂಲಕ ಇನ್ನುಳಿದ ಜಾತಿಗಳನ್ನು ಅವಕಾಶ ವಂಚಿತರನ್ನಾಗಿಸಿ, ಸಮಾಜದ ಮುಖ್ಯವಾಹಿನಿಯಿಂದ ದೂರ ಇರಿಸಿವೆ. ಸಾಮಾಜಿಕ ಮತ್ತು ರಾಜಕೀಯ ಅಧಿಕಾರಗಳಿಂದ ವಂಚನೆಗೊಳಗಾದ ಶೋಷಿತ ಜಾತಿಗಳಿಗೆ ಜಾತಿ ಆಧಾರಿತವಾದ ಪ್ರಾತಿನಿಧ್ಯ ನೀಡುವುದರಿಂದ ಅವುಗಳ ಮೇಲೆ ಶತಮಾನಗಳಿಂದಾದ ಸಾಮಾಜಿಕ ಅನ್ಯಾಯಕ್ಕೆ ಪರಿಹಾರ ಒದಗಿಸಿದಂತಾಗುತ್ತದೆ ಅಥವಾ ಸಾಮಾಜಿಕ ನ್ಯಾಯ ದೊರಕಿಸಿಕೊಟ್ಟಂತಾಗುತ್ತದೆ. ಹಾಗೂ ಭಾರತೀಯ ಸಾಂಪ್ರದಾಯಿಕ ಸಮಾಜದಲ್ಲಿದ್ದ ಸಾಮಾಜಿಕ ತಾರತಮ್ಯವನ್ನು ತೊಲಗಿಸಿ ಸಮಾನತೆಯನ್ನು ಮೂಡಿಸುವುದಕ್ಕೂ ಸಹಾಯವಾಗುತ್ತದೆ' ಎನ್ನುವ ಧೋರಣೆಯನ್ನು ಬ್ರಿಟಿಷ್ ಹಾಗೂ ಆಧುನಿಕ ಪ್ರಭುತ್ವಗಳೆರಡೂ ಹಂಚಿಕೊಂಡಿವೆ. ಅಂದರೆ, ಪ್ರಜಾಪ್ರಭುತ್ವವು ಜಾತಿ ಆಧಾರಿತವಾಗಿ ನೀಡುತ್ತಿರುವ ಪ್ರಾತಿನಿಧ್ಯದ ನೀತಿಗಳಿಗೆ ಜಾತಿವ್ಯವಸ್ಥೆಯು ಇಲ್ಲಿನ ಸಾಮಾಜಿಕ ರಚನೆ ಹಾಗೂ ಅಸಮಾನತೆಯ ಮೂಲವಾಗಿದೆ ಎನ್ನುವ ಜಾತಿವ್ಯವಸ್ಥೆಯ ಸೈದ್ಧಾಂತಿಕ ಚೌಕಟ್ಟು ತಳಹದಿಯನ್ನು ಒದಗಿಸಿದೆ.

ಈ ಹಿನ್ನೆಲೆಯನ್ನು ಹೊಂದಿದ್ದ ಬ್ರಿಟಿಷ್ ಪ್ರಭುತ್ವವು ಸಾಮಾಜಿಕ ಅಸಮಾನತೆಯನ್ನು ಸರಿಪಡಿಸಲು ಹಾಗೂ ಸಮಾನತೆಯನ್ನು ಮೂಡಿಸಿ, ಸಾಮಾಜಿಕ ಅನ್ಯಾಯಕ್ಕೊಳಗಾದ ಜಾತಿಗಳಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಲು ಅಧಿಕಾರ ವಿಕೇಂದ್ರೀಕರಣದ ಹೆಸರಿನಡಿಯಲ್ಲಿ ಸ್ಥಳೀಯ ಸರ್ಕಾರಗಳಲ್ಲಿ ಹಿಂದುಳಿದ ಜಾತಿಗಳಿಗೆ ಪ್ರಾಮುಖ್ಯತೆ ಹಾಗೂ ಕೆಲವು ರಿಯಾಯಿತಿಗಳನ್ನು ನೀಡಿತು (ಎಂ.ಎನ್. ಶ್ರೀನಿವಾಸ್, ೧೯೬೭: ೫). ಈ ರೀತಿಯ ರಾಜಕೀಯ ಮೌಲ್ಯಗಳು ಸ್ವಾತಂತ್ರ‍್ಯನಂತರ ಪ್ರಾತಿನಿಧಿಕ ಪ್ರಭುತ್ವದ ಹೆಸರಿನಲ್ಲಿ ಇಂದಿಗೂ ಮುಂದುವರೆದುಕೊಂಡು ಬರುತ್ತಿವೆ. ಹಾಗೂ ಪ್ರಾತಿನಿಧಿಕ ಪ್ರಭುತ್ವವೂ ಸಹ ಭಾರತೀಯ ಸಮಾಜದ ಕುರಿತ ಜಾತಿವ್ಯವಸ್ಥೆಯ ಸಿದ್ಧಾಂತಗಳ ಚೌಕಟ್ಟನ್ನೇ ಪ್ರತಿನಿಧಿತ್ವದ ಆಯ್ಕೆಗೆ ತಳಹದಿಯನ್ನಾಗಿ ಇಟ್ಟುಕೊಂಡಿದೆ. ಹಾಗೂ ಜಾತಿಯ ಆಧಾರಿತವಾಗಿಯೇ ಪ್ರಾತಿನಿಧ್ಯವನ್ನು ನೀಡಲಾಗುತ್ತಿದೆ. ಇದರ ಮೂಲಕ ಜಾತಿವ್ಯವಸ್ಥೆಯ ವಿನಾಶ ಸಾಧ್ಯವೆಂದೂ ಭಾವಿಸಿಕೊಂಡಿದೆ. ಅಂದರೆ, ಅಧಿಕಾರ ವಂಚಿತ ಜಾತಿಗಳಿಗೆ ಪ್ರಾತಿನಿಧ್ಯದ ಮೂಲಕ ಅಧಿಕಾರ ನೀಡಿ, ಆ ಜಾತಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಾಧ್ಯವಾಗುತ್ತದೆ. ಇದರಿಂದ ಸಾಂಪ್ರದಾಯಿಕ ಜಾತಿ ಪರಿಕಲ್ಪನೆ ಅಥವಾ ಜಾತಿವ್ಯವಸ್ಥೆಯು ನಿರ್ಮೂಲನೆಯಾಗುತ್ತದೆ. ಎಲ್ಲಾ ಜಾತಿಗಳಿಗೂ ಸಮಾನತೆ ದೊರಕುತ್ತದೆ ಎನ್ನುವ ಆಶಯವನ್ನು ಹೊಂದಿದೆ (ರಜನಿ ಕೋಥಾರಿ, ೧೯೭೦: ೨೧-೨೧. ಆಂದ್ರೆ ಬೆಥಾಲೀ, ೨೦೧೧: ೨೧೩. ಫ್ಯೂಲರ್, ೧೯೮೪.).

ಆದರೆ, ಈ ಆಶಯವನ್ನು ಹೊಂದಿರುವ ಪ್ರಜಾಪ್ರಭುತ್ವದ ನೀತಿಗಳಿಂದ ಜಾತಿವ್ಯವಸ್ಥೆಯು ನಾಶವಾಗುವ ಬದಲಿಗೆ ಜಾತಿಗಳು ಸಂಘಟನೆಗೊಳ್ಳಲು ಕಾರಣವಾಗುತ್ತಿದೆ. ಜಾತಿಸಂಘಟನೆಗಳ ರಚನೆಯು ಜಾವ್ಯವಸ್ಥೆಯನ್ನು ವಿನಾಶ ಮಾಡುವ ಬದಲಾಗಿ ಜಾತಿ ಅಸ್ಮಿತೆಯನ್ನು ಗಟ್ಟಿಗೊಳಿಸುತ್ತಿವೆ. ಅಂದರೆ, ಪ್ರಭುತ್ವದ ಧೋರಣೆಗಳು ಜಾತಿವ್ಯವಸ್ಥೆಯ ನಾಶದ ಬದಲಾಗಿ ಜಾತಿವ್ಯವಸ್ಥೆಯ ಅಸ್ತಿತ್ವವನ್ನು ಪೋಷಿಸುತ್ತಿದೆ ಅಥವಾ ಬಲಗೊಳಿಸುತ್ತಿದೆ ಎನ್ನುವ ವಾದಗಳೂ ಪ್ರಚಲಿತದಲ್ಲಿವೆ. ಅವುಗಳನ್ನು ಈ ಮುಂದಿನಂತೆ ಗಮನಿಸಬಹುದು.

## ೩. ಪ್ರಜಾಪ್ರಭುತ್ವದ ಧೋರಣೆಗಳು ಮತ್ತು ಜಾತಿವಿನಾಶ?

ಭಾರತದಲ್ಲಿ ಸಾಮಾಜಿಕ ಅನ್ಯಾಯಕ್ಕೆ ಕಾರಣವಾಗಿರುವ ಜಾತಿವ್ಯವಸ್ಥೆಯನ್ನು ವಿನಾಶ ಮಾಡುವ ಮೂಲಕ ಸಾಮಾಜಿಕ ನ್ಯಾಯ ದೊರಕಿಸುವ ಉದ್ದೇಶದಿಂದ ಪ್ರಜಾಪ್ರಭುತ್ವವು ಜಾತಿ ಆಧಾರಿತ ಪ್ರಾತಿನಿಧ್ಯವನ್ನು ಕಲ್ಪಿಸಿಕೊಡುತ್ತಿದೆ. ಆದರೆ, ವ್ಯಕ್ತಿಗಳಿಗೆ ರಾಜಕೀಯ ಪ್ರಾತಿನಿಧ್ಯವನ್ನು ಹಾಗೂ ಪ್ರಭುತ್ವದ ಇನ್ನಿತರೇ ಸೌಲಭ್ಯವನ್ನು ಪಡೆದುಕೊಳ್ಳಲು ಜಾತಿಯು ಮಾನದಂಡವಾಗಿರುವುದರಿಂದ ಅದನ್ನು ಉಳಿಸಿಕೊಳ್ಳುವ ಅನಿವಾರ್ಯತೆಗೆ ಅವನು ಸಿಲುಕಿಕೊಳ್ಳುತ್ತಾನೆ. ಅಂದರೆ, ಜಾತಿಯ ಹೆಸರಿನ ಬಲದ ಮೂಲಕವೇ ಅವನು ಪ್ರಭುತ್ವದಲ್ಲಿ ಭಾಗವಹಿಸುವ ಅನಿವಾರ್ಯತೆಯು ಸೃಷ್ಟಿಯಾಗುತ್ತಿದೆ. ಈ ನೆಲೆಯಲ್ಲಿ ಜಾತಿವಿನಾಶದ ಗುರಿಯನ್ನು ಇಟ್ಟುಕೊಂಡಿರುವ



CO-ORDINATOR
IQAC
K.L.E.S' Arts & Commerce College
PRINCIPAL
K.L.E. Society's
Arts & Commerce College

# ಪ್ರಜಾಪ್ರಭುತ್ವದ ಧೋರಣೆಗಳು ಮತ್ತು ಜಾತಿವ್ಯವಸ್ಥೆಯ ಸೈದ್ಧಾಂತಿಕ ಚೌಕಟ್ಟು

ಡಾ. ವೀಣಾ. ಈ.: ಸಹಾಯಕ ಪ್ರಾಧ್ಯಪಕರು, ರಾಜ್ಯಶಾಸ್ತ್ರ ವಿಭಾಗ, ಕೆಎಲ್‌ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗ

## ಸಾರಾಂಶ:

ಭಾರತದಲ್ಲಿ ವಸಾಹತು ಆಡಳಿತದಿಂದ ಸ್ವತಂತ್ರಗೊಂಡನಂತರ ಪ್ರಾತಿನಿಧಿಕ ಪ್ರಜಾಪ್ರಭುತ್ವ ಮಾದರಿಯನ್ನು ರಾಜಕೀಯ ವ್ಯವಸ್ಥೆಯನ್ನಾಗಿ ಅಳವಡಿಸಿಕೊಳ್ಳಲಾಯಿತು. ಭಾರತದಲ್ಲಿ ಅಸಮಾನತೆಯಿಂದ ಕೂಡಿದ ಜಾತಿವ್ಯವಸ್ಥೆಯ ಸಾಮಾಜಿಕ ರಚನೆಯಿರುವುದರಿಂದ ಅದನ್ನು ಹೋಗಲಾಡಿಸಲು ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯು ಸಹಾಯಕವಾಗಬಲ್ಲದು ಎಂಬಂತೆ ಸ್ವೀಕರಿಸಲಾಗಿದೆ. ಏಕೆಂದರೆ, ಜಾತಿವ್ಯವಸ್ಥೆಯ ಪರಿಣಾಮವಾಗಿ ಕೆಲವು ಜಾತಿಗಳು ಮಾತ್ರವೇ ಎಲ್ಲಾ ಸೌಲಭ್ಯ, ಅಧಿಕಾರವನ್ನು ಅನುಭವಿಸಿ, ಇತರ ಜಾತಿಗಳನ್ನು ಅದರಿಂದ ವಂಚಿಸಿ, ಮುಖ್ಯವಾಹಿನಿಯಿಂದ ದೂರವಿಟ್ಟಿವೆ. ಪ್ರಾತಿನಿಧಿಕ ಪ್ರಜಾಪ್ರಭುತ್ವದಿಂದಾಗಿ ಎಲ್ಲಾ ಜಾತಿಗಳಿಗೂ ಸೂಕ್ತ ಪ್ರಾತಿನಿಧ್ಯ ದೊರಕುತ್ತದೆ. ಅಂದರೆ, ಜಾತಿವ್ಯವಸ್ಥೆಯ ಪರಿಣಾಮವಾಗಿ ಸಮಾಜಿಕವಾಗಿ ಅಂಚಿಗೆ ಸರಿದಿರುವ ಜಾತಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಅವರಿಗೆ ನೀಡುವ ರಾಜಕೀಯ ಅಧಿಕಾರವು ಸಹಾಯ ಮಾಡುತ್ತದೆ. ಇದರಿಂದ ಕ್ರಮೇಣ ಅಸಮಾನತೆ ಹಾಗೂ ಅದಕ್ಕೆ ಕಾರಣವಾದ ಜಾತಿವ್ಯವಸ್ಥೆಯೂ ನಿರ್ಮೂಲನೆಯಾಗುತ್ತದೆ ಎನ್ನುವ ಆಶಯದ ಹಿನ್ನೆಲೆಯಲ್ಲಿ ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯಡಿಯಲ್ಲಿ ಜಾತಿಯಾಧಾರಿತ ಪ್ರಾತಿನಿಧ್ಯವನ್ನು ದೊರಕಿಸಿಕೊಡಲಾಗಿದೆ. ಇನ್ನೊಂದೆಡೆ, ಇದಕ್ಕೆ ತದ್ವಿರುದ್ಧವಾಗಿ, ಯಾವ ವ್ಯವಸ್ಥೆಯನ್ನು ನಾಶಮಾಡಲು ಪ್ರಜಾಪ್ರಭುತ್ವದ ಹೆಸರಿನಡಿಯಲ್ಲಿ ಜಾತಿಯಾಧಾರಿತ ಪ್ರಾತಿನಿಧ್ಯಕ್ಕೆ ಅವಕಾಶ ಕಲ್ಪಿಸಿಕೊಡಲಾಗಿದೆಯೋ, ಅದರಿಂದ ಜಾತಿವ್ಯವಸ್ಥೆ ನಾಶವಾಗುವ ಬದಲಾಗಿ ಮತ್ತಷ್ಟು ಗಟ್ಟಿಯಾಗುತ್ತಿದೆ ಎನ್ನುವ ವಾದಗಳು ಕಂಡುಬರುತ್ತಿವೆ. ಜಾತಿಸಂಘಟನೆಗಳು ಇದಕ್ಕೆ ಪ್ರಮುಖ ಆಧಾರಗಳಾಗಿವೆ. ಹಾಗಾದರೆ, ಪ್ರಾತಿನಿಧಿಕ ಪ್ರಜಾಪ್ರಭುತ್ವವು ಯಾವ ಉದ್ದೇಶವನ್ನಿಟ್ಟುಕೊಂಡು ಅಸ್ತಿತ್ವಕ್ಕೆ ಬಂದಿದೆಯೋ, ಅದಕ್ಕೆ ವ್ಯತಿರಿಕ್ತವಾದುದನ್ನೇ ಸಾಧಿಸುತ್ತಿದೆ ಎಂದಾಗುತ್ತದೆ. ಈ ಸಂದಿಗ್ಧತೆಯನ್ನು ಹೇಗೆ ಅರ್ಥೈಸುವುದು? ಅಥವಾ ಈ ಸಂದಿಗ್ಧತೆಯ ಸ್ವರೂಪವೇನು? ಎಂಬುದನ್ನು ಪ್ರಸ್ತುತ ಲೇಖನದಲ್ಲಿ ಪರಿಶೀಲಿಸಲಾಗಿದೆ.

**ಮುಖ್ಯ ಪದಗಳು:** ಪ್ರಜಾಪ್ರಭುತ್ವ, ಪ್ರಾತಿನಿಧ್ಯ, ಜಾತಿವ್ಯವಸ್ಥೆ, ಜಾತಿ ಸಂಘಟನೆಗಳು, ಅಸ್ಮಿತೆ.

## ೧ ಪೀಠಿಕೆ:

ಭಾರತೀಯ ಸಮಾಜಿಕ ಪಿಡುಗು ಎಂದು ಗುರುತಿಸಲಾಗಿರುವ ಜಾತಿವ್ಯವಸ್ಥೆಯನ್ನು ಹೋಗಲಾಡಿಸಲು ಪ್ರಾತಿನಿಧಿಕ ಪ್ರಜಾಪ್ರಭುತ್ವವು ಅನಿವಾರ್ಯ ಎನ್ನವ ಘೋಷಣೆಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಪ್ರಜಾಪ್ರಭುತ್ವದಂತಹ ಆಧುನಿಕ ರಾಜಕೀಯ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವ ಮೊದಲು, ಬ್ರಿಟಿಷ್ ವಸಾಹತು ಆಡಳಿತದ ಸಂದರ್ಭದಲ್ಲಿಯೂ ಸಹ ಜಾತಿವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಪ್ರಭುತ್ವದ ಮೂಲಕ ಹಲವು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿತ್ತು. ರಾಜಕೀಯದಲ್ಲಿ ಅಥವಾ ಸ್ಥಳೀಯ ಸರ್ಕಾರಗಳಲ್ಲಿ ಜಾತಿ ಆಧಾರಿತ ಪ್ರಾತಿನಿಧ್ಯವನ್ನು ಕಲ್ಪಿಸಿಕೊಡಲಾಗಿತ್ತು. ಇದು ಸ್ವಾತಂತ್ರ ನಂತರದಲ್ಲಿ ಆಧುನಿಕ ರಾಜಕೀಯ ಮೌಲ್ಯವಾಗಿ, ಪ್ರಾತಿನಿಧಿಕ ಸರ್ಕಾರದ ರೂಪದಲ್ಲಿ ಸಾಮಾಜಿಕ ನ್ಯಾಯ ಹಾಗೂ ಸಮಾನತೆಯ ಹೆಸರಿನಲ್ಲಿ ಇಂದಿಗೂ ಮುಂದುವರೆದುಕೊಂಡು ಬರುತ್ತಿದೆ.

## ೨ ಪ್ರಜಾಪ್ರಭುತ್ವ ಮತ್ತು ಜಾತಿವ್ಯವಸ್ಥೆ ಕುರಿತ ಸೈದ್ಧಾಂತಿಕ ಹಿನ್ನೆಲೆ:

'ಭಾರತೀಯ ಸಮಾಜವು ಜಾತಿವ್ಯವಸ್ಥೆಯ ಬುನಾದಿಯ ಮೇಲೆ ರಚನೆಯಾಗಿದ್ದು, ಅದು ಇಲ್ಲಿನ ಜಾತಿಗಳನ್ನು ಶ್ರೇಣೀಕೃತವಾಗಿ ಜೋಡಿಸಿದ್ದು ತಾರತಮ್ಯದಿಂದ ಕೂಡಿದೆ. ಇದರಲ್ಲಿ ಕೆಲವು ಜಾತಿಗಳು ಉನ್ನತ ಸ್ಥಾನಮಾನ, ಸೌಲಭ್ಯಗಳನ್ನು ಹಾಗೂ



CO-ORDINATOR
IQAC
K.L.E.S' Arts & Commerce College
GADAG
PRINCIPAL
K.L.E. Society's
Arts & Commerce College
GADAG-BETGERI-582101

ಪ್ರಕ್ರಿಯೆಯು ಪ್ರಾರಂಭವಾಯಿತು. ಹಾಗಾಗಿ, ಜಾತಿವ್ಯವಸ್ಥೆಯು ನಿರ್ಮೂಲನೆಯ ಉದ್ದೇಶವಿಟ್ಟುಕೊಂಡು ಬಂದಿರುವ
ಪ್ರಜಾಪ್ರಭುತ್ವದಿಂದ ಜಾತಿಗಳ ಒಗ್ಗೂಡುವಿಕೆಗೆ ಅವಕಾಶವಾಗಿರುವ ಸಂಗತಿಯು ಜೋತ್ಸ್ನರವರ ಬರಹದಲ್ಲಿ ಸ್ಪಷ್ಟವಾಗುತ್ತದೆ.

ಈ ಸಂಗತಿಯನ್ನು ಇನ್ನೂ ಸ್ಪಷ್ಟವಾಗಿ ಎಸ್. ಚಂದ್ರಶೇಖರ್‌ರವರು ಜಾತಿಗಳು ಸಂಘಟನೆಗಳಾಗುತ್ತಿರುವ ಪ್ರಕ್ರಿಯೆಯು
ರಾಜಕೀಯ ವ್ಯವಸ್ಥೆಯಲ್ಲಿ ಜಾತಿಯನ್ನು ಗುರುತಿಸುತ್ತಿರುವುದರ ಪರಿಣಾಮವೆಂದು ಈ ಮುಂದಿನಂತೆ ವಿಶ್ಲೇಷಿಸಿದ್ದಾರೆ: "...ಭಾರತದಲ್ಲಿ
ವಿಚ್ಛಿದ್ರಕಾರಿ, ಸ್ವಾರ್ಥಸಾಧಕ ಶಕ್ತಿಗಳ ಕೈಯಲ್ಲಿ 'ಜಾತಿ' ಆಟಿಕೆಯಾಗಿ ಬಳಕೆಯಾಗುತ್ತಿದೆ. ರಾಷ್ಟ್ರದಲ್ಲಿ ಅಭದ್ರತೆ ವಿಚ್ಛಿದ್ರಕಾರಿ ಪ್ರವೃತ್ತಿ
ಬೆಳೆಯಲು ಜಾತಿ ಕೂಡ ಒಂದು ಪ್ರಮುಖ ಸಾಧನವಾಗಿದೆ. ಸ್ವಾರ್ಥಿ ರಾಜಕಾರಣಿಗಳು ಇದನ್ನು ಯಥೇಚ್ಛವಾಗಿ ಬಳಸಿಕೊಳ್ಳುತ್ತಿದ್ದಾರೆ.
ವಿವಿಧ ಬಣ್ಣಗಳಲ್ಲಿ ಜಾತಿ ಸಂಘಟನೆಗಳು ಹೆಚ್ಚಿವೆ. ಸಾಮಾಜಿಕವೆಂದೋ- ಸಾಂಸ್ಕೃತಿಕವೆಂದೋ ಅವು ತಮ್ಮನ್ನು ಕರೆದುಕೊಂಡಿವೆ.
ಈ ಸಂಘಟನೆಗಳ ಘೋಷಿತ ಉದ್ದೇಶಗಳಂತೂ ಒಳ್ಳೆಯವೇ. ಆದರೆ ಸಾಮಾಜಿಕ ಒಗ್ಗಟ್ಟಿಗೆ ಈ ಸಂಘಟನೆಗಳ ಕೊಡುಗೆ ಏನು
ಎನ್ನುವುದು ಬಹಳ ಮುಖ್ಯ. ಇದರ ಬಗ್ಗೆ ವಸ್ತುನಿಷ್ಠ ಅಧ್ಯಯನಗಳ ಕೊರತೆ ಇದೆ. ಇಷ್ಟೆಲ್ಲಾ ಹೇಳಿಯೂ ಒಂದಂಶವನ್ನು
ಸ್ಪಷ್ಟಪಡಿಸಲೇ ಬೇಕು. ಸಂಘಟಿತ ಜಾತಿಗಳು ರಾಷ್ಟ್ರೀಯ ಭಾವೈಕ್ಯತೆಗೆ ಕೊಟ್ಟಿರುವ ಕೊಡುಗೆ ಸಂದೇಹಾಸ್ಪದವಾದ್ದು. ಎಷ್ಟೋ ವೇಳೆ
ಸಾಂಸ್ಕೃತಿಕ, ಧಾರ್ಮಿಕ ಸಂಘಟನೆಗಳೆಂದು ತಮ್ಮನ್ನು ಬಣ್ಣಿಸಿಕೊಂಡ ಈ ಸಂಘಗಳು ಸಾಮಾಜಿಕ ಸೌಹಾರ್ದಕ್ಕೆ ಎರವಾಗಿವೆ. ಮತ್ತು
ತನ್ಮೂಲಕ ರಾಷ್ಟ್ರೀಯ ಏಕತೆಗೆ ಸಾಮಾಜಿಕ ಸಾಮಾರಸ್ಯಕ್ಕೆ ಭಂಗ ತಂದಿವೆ. ಇದು ಎಲ್ಲಾ ಕಾಲಕ್ಕೂ ಸತ್ಯವಾದ ಮಾತು. ...ಕಾನೂನು
ರೀತ್ಯ ಮಾನ್ಯತೆ ಜಾತಿಗೆ ಇಲ್ಲದಿದ್ದರೂ ರಾಜಕೀಯವಾಗಿ ಅಲಿಖಿತ ಮಾನ್ಯತೆ ಇದೆ. ಜಾತಿವಾರು ಸಂಖ್ಯೆಯ ಆಧಾರದ ಮೇಲೆಯೇ
ಎಲ್ಲಾ ರಾಜಕೀಯ ಸವಲತ್ತುಗಳ ಹಂಚಿಕೆಯೂ ನಡೆಯುತ್ತದೆ. ಇದು ಜಾತಿಗಳು ಜಾತಿಪದ್ಧತಿ ನೇತ್ಯಾತ್ಮಕವಾಗಿ ಗಟ್ಟಿಗೊಳ್ಳಲು
ಸಹಾಯಕವಾಗಿದೆ. ಇದರಿಂದ ಅಸಂಘಟಿತ ಜಾತಿಗಳು ಸಂಘಟಿತರಾಗಲು ಪ್ರೇರೇಪಣೆ ದೊರೆಯುತ್ತಿದೆ. ಸ್ವಾತಂತ್ರ್ಯ ನಂತರ ವಿವಿಧ
ರಾಜ್ಯಗಳಲ್ಲಿ ವಿಪರೀತ ಹೆಚ್ಚಿರುವ ಜಾತಿ ಸಂಘಗಳು ಇದಕ್ಕೆ ಉದಾಹರಣೆ" (ಎಸ್. ಚಂದ್ರಶೇಖರ್, ೧೯೯೯: ೧೪೨-೧೪೩).
ಜಾತಿಗೆ ಸಂಬಂಧಿಸಿದ ಪ್ರಜಾಪ್ರಭುತ್ವದ ಧೋರಣೆಗಳಿಗೆ ತಕ್ಕಂತೆ ಜಾತಿಯನ್ನು ಮುನ್ನೆಲೆಗೆ ತರಲು ಸಂಘಟನಾ ಪ್ರಕ್ರಿಯೆ ಮೂಲಕ
ಪ್ರಯತ್ನಿಸಲಾಗುತ್ತಿದೆ. ಅಂದರೆ, ಪ್ರಾತಿನಿಧಿಕ ಪ್ರಭುತ್ವದಲ್ಲಿ ರಾಜಕೀಯ ವ್ಯವಸ್ಥೆಯೊಳಗೆ ವ್ಯಕ್ತಿಯನ್ನು ಗುರುತಿಸಲು ಜಾತಿಗಳನ್ನು
ಮಾನದಂಡವನ್ನಾಗಿ ಬಳಸಿಕೊಳ್ಳಲು ಪ್ರಾರಂಭಿಸಲಾಯಿತು. ಅದಕ್ಕೆ ಪ್ರತಿಕ್ರಿಯೆಯಾಗಿ ಜಾತಿಗಳ ನಾಯಕರುಗಳು ಜಾತಿಗಳನ್ನು
ಮುನ್ನೆಲೆಗೆ ತರಲು, ಸಂಘಟಿಸಲು ಹಾಗೂ ಅವುಗಳನ್ನು ಬಳಸಿಕೊಳ್ಳಲು ಪ್ರಾರಂಭಿಸಿದರು. ಇದರಿಂದ ಜಾತಿವ್ಯವಸ್ಥೆಯು
ನಾಶವಾಗದೇ, ಜಾತಿಗಳ ನಡುವೆ ಸಂಘರ್ಷಗಳು ಪ್ರಾರಂಭವಾಗಿ ಅಭದ್ರತೆಗೆ ಕಾರಣವಾಗಿದೆ. ಇದಕ್ಕೆಲ್ಲಾ ಮುಖ್ಯ ಕಾರಣ
ಜಾತಿಯಾಧಾರಿತ ರಾಜಕೀಯ ಗುರುತಿಸುವಿಕೆ ಎಂಬುದಾಗಿ ಲೇಖಕರು ವಾದಿಸಿದ್ದಾರೆ. ಚಂದ್ರಶೇಖರ್ ಭಟ್‌ರವರೂ ಸಹ
ಜಾತಿವಾರು ರಾಜಕೀಯ ಗುರುತಿಸುವಿಕೆಯು ಜಾತಿಗಳ ಒಗ್ಗೂಡುವಿಕೆಗೆ ಕಾರಣವಾಯಿತು ಎಂಬುದನ್ನು ಹಿಂದುಳಿದ ವರ್ಗಗಳ
ಚಳವಳಿಯ ಸಂದರ್ಭದ ಉದಾಹರಣೆಯ ಮೂಲಕ ಗುರುತಿಸುತ್ತಾರೆ (ಚಂದ್ರಶೇಖರ್ ಭಟ್, ೨೦೦೦: ೧೭೧).

## ೪ ಸಮಾರೋಪ:

ಜಾತಿಯಾಧಾರಿತವಾಗಿ ಪ್ರಾತಿನಿಧ್ಯ ನೀಡುತ್ತಿರುವುದು ಜಾತಿಸಂಘಟನೆಗಳ ರಚನೆಗೆ ಅಥವಾ ಜಾತಿಗಳನ್ನು ಬಲಗೊಳಿಸುವ
ಪ್ರಕ್ರಿಯೆಗೆ ಕಾರಣವಾಗಿದೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಆದರೆ, ಜಾತಿಗಳ ಹಿತಾಸಕ್ತಿಯನ್ನು ಒಗ್ಗೂಡಿಸುವುದು ಅಥವಾ ಜಾತಿಗಳ
ಉಪಗುಂಪುಗಳನ್ನೆಲ್ಲಾ ಸೇರಿಸಿ ಒಂದು ಪ್ರಬಲ ಜಾತಿಯನ್ನಾಗಿ ಸಂಘಟಿಸುವುದು ಜಾತಿವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ
ಪ್ರಕ್ರಿಯೆಯ ಭಾಗವಾಗಿರಲು ಸಾಧ್ಯವಿಲ್ಲ. ಜಾತಿಯನ್ನು ಬಲಪಡಿಸಿದರೆ ಜಾತಿವಿನಾಶ ಮಾಡಿದ ಹಾಗಾಗುತ್ತದೆಯೆ? ಅಥವಾ ಜಾತಿ
ವಿನಾಶವೆಂದರೆ ಜಾತಿಗಳನ್ನು ಸಂಘಟಿಸುವುದು ಎಂದರ್ಥವೆ? ಜಾತಿವಿನಾಶ ಮಾಡುವ ಉದ್ದೇಶವನ್ನು ಹೊಂದಿರುವ ಪ್ರಭುತ್ವವು
ಜಾತಿಗಳನ್ನು ಗಟ್ಟಿಗೊಳಿಸಲು ಪ್ರೇರಣೆ ನೀಡುತ್ತಿರುವುದು ಇಲ್ಲಿ ಢಾಳಾಗಿ ಕಾಣುತ್ತದೆ. ಇದನ್ನು ಅನೇಕ ಚಿಂತಕರು ಗುರುತಿಸಿ,
ಜಾತಿವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಉದ್ದೇಶವನ್ನು ಹೊಂದಿರುವ ಪ್ರಜಾಪ್ರಭುತ್ವದ ಧೋರಣೆಯು ಅದಕ್ಕೆ ವಿರುದ್ಧವಾಗಿ



CO-ORDINATOR
IQAC
... Commerce College
PRIN...
K.L.E. S...
Arts & Comm...

Madhya Bharti -Humanities and Social Sciences
(मध्य भारती) ISSN: 0974-0066

UGC Care Group I Journal
Vol-84 No. 01, July – December: 2023

ಪ್ರಕ್ರಿಯೆಯು ಪ್ರಾರಂಭವಾಯಿತು. ಹಾಗಾಗಿ, ಜಾತಿವ್ಯವಸ್ಥೆಯ ನಿರ್ಮೂಲನೆಯ ಉದ್ದೇಶವಿಟ್ಟುಕೊಂಡು ಬಂದಿರುವ ಪ್ರಜಾಪ್ರಭುತ್ವದಿಂದ ಜಾತಿಗಳ ಒಗ್ಗೂಡುವಿಕೆಗೆ ಅವಕಾಶವಾಗಿರುವ ಸಂಗತಿಯು ಜೋಡ್ಕರವರ ಉಲ್ಲೇಖದಲ್ಲಿ ಸ್ಪಷ್ಟವಾಗುತ್ತದೆ.

ಈ ಸಂಗತಿಯನ್ನು ಇನ್ನೂ ಸ್ಪಷ್ಟವಾಗಿ ಎಸ್. ಚಂದ್ರಶೇಖರ್‌ರವರು ಜಾತಿಗಳು ಸಂಘಟನೆಗಳಾಗುತ್ತಿರುವ ಪ್ರಕ್ರಿಯೆಯು ರಾಜಕೀಯ ವ್ಯವಸ್ಥೆಯಲ್ಲಿ ಜಾತಿಯನ್ನು ಗುರುತಿಸುತ್ತಿರುವುದರ ಪರಿಣಾಮವೆಂದು ಈ ಮುಂದಿನಂತೆ ವಿಶ್ಲೇಷಿಸಿದ್ದಾರೆ: "...ಭಾರತದಲ್ಲಿ ವಿಚ್ಛಿದ್ರಕಾರಿ, ಸ್ವಾರ್ಥಸಾಧಕ ಶಕ್ತಿಗಳ ಕೈಯಲ್ಲಿ 'ಜಾತಿ' ಆಟಿಕೆಯಾಗಿ ಬಳಕೆಯಾಗುತ್ತಿದೆ. ರಾಷ್ಟ್ರದಲ್ಲಿ ಅಭದ್ರತೆ ವಿಚ್ಛಿದ್ರಕಾರಿ ಪ್ರವೃತ್ತಿ ಬೆಳೆಯಲು ಜಾತಿ ಕೂಡ ಒಂದು ಪ್ರಮುಖ ಸಾಧನವಾಗಿದೆ. ಸ್ವಾರ್ಥಿ ರಾಜಕಾರಣಿಗಳು ಇದನ್ನು ಯಶಸ್ವಿಯಾಗಿ ಬಳಸಿಕೊಳ್ಳುತ್ತಿದ್ದಾರೆ. ವಿವಿಧ ಬಣ್ಣಗಳಲ್ಲಿ ಜಾತಿ ಸಂಘಟನೆಗಳು ಹೆಚ್ಚಿವೆ. ಸಾಮಾಜಿಕವೆಂದೋ- ಸಾಂಸ್ಕೃತಿಕವೆಂದೋ ಅವು ತಮ್ಮನ್ನು ಕರೆದುಕೊಂಡಿವೆ. ಈ ಸಂಘಟನೆಗಳ ಘೋಷಿತ ಉದ್ದೇಶಗಳಂತೂ ಒಳ್ಳೆಯವೇ. ಆದರೆ ಸಾಮಾಜಿಕ ಒಗ್ಗಟ್ಟಿಗೆ ಈ ಸಂಘಟನೆಗಳ ಕೊಡುಗೆ ಏನು ಎನ್ನುವುದು ಬಹಳ ಮುಖ್ಯ. ಇದರ ಬಗ್ಗೆ ವಸ್ತುನಿಷ್ಠ ಅಧ್ಯಯನಗಳ ಕೊರತೆ ಇದೆ. ಇಷ್ಟೆಲ್ಲಾ ಹೇಳಿಯೂ ಒಂದಂಶವನ್ನು ಸ್ಪಷ್ಟಪಡಿಸಲೇ ಬೇಕು. ಸಂಘಟಿತ ಜಾತಿಗಳು ರಾಷ್ಟ್ರೀಯ ಭಾವೈಕ್ಯತೆಗೆ ಕೊಟ್ಟಿರುವ ಕೊಡುಗೆ ಸಂದೇಹಾಸ್ಪದವಾದ್ದು. ಎಷ್ಟೋ ವೇಳೆ ಸಾಂಸ್ಕೃತಿಕ, ಧಾರ್ಮಿಕ ಸಂಘಟನೆಗಳೆಂದು ತಮ್ಮನ್ನು ಬಣ್ಣಿಸಿಕೊಂಡ ಈ ಸಂಘಗಳು ಸಾಮಾಜಿಕ ಸೌಹಾರ್ದಕ್ಕೆ ಎರವಾಗಿವೆ. ಮತ್ತು ತನ್ಮೂಲಕ ರಾಷ್ಟ್ರೀಯ ಏಕತೆಗೆ ಸಾಮಾಜಿಕ ಸಾಮಾರಸ್ಯಕ್ಕೆ ಭಂಗ ತಂದಿವೆ. ಇದು ಎಲ್ಲಾ ಕಾಲಕ್ಕೂ ಸತ್ಯವಾದ ಮಾತು. ...ಕಾನೂನು ರೀತ್ಯ ಮಾನ್ಯತೆ ಜಾತಿಗೆ ಇಲ್ಲದಿದ್ದರೂ ರಾಜಕೀಯವಾಗಿ ಅಲಿಖಿತ ಮಾನ್ಯತೆ ಇದೆ. ಜಾತಿವಾರು ಸಂಖ್ಯೆಯ ಆಧಾರದ ಮೇಲೆಯೇ ಎಲ್ಲಾ ರಾಜಕೀಯ ಸವಲತ್ತುಗಳ ಹಂಚಿಕೆಯೂ ನಡೆಯುತ್ತದೆ. ಇದು ಜಾತಿಗಳು ಜಾತಿಪದ್ಧತಿ ನೇತ್ಯಾತ್ಮಕವಾಗಿ ಗಟ್ಟಿಗೊಳ್ಳಲು ಸಹಾಯಕವಾಗಿದೆ. ಇದರಿಂದ ಅಸಂಘಟಿತ ಜಾತಿಗಳು ಸಂಘಟಿತರಾಗಲು ಪ್ರೇರೇಪಣೆ ದೊರೆಯುತ್ತಿದೆ. ಸ್ವಾತಂತ್ರ ನಂತರ ವಿವಿಧ ರಾಜ್ಯಗಳಲ್ಲಿ ವಿಪರೀತ ಹೆಚ್ಚಿರುವ ಜಾತಿ ಸಂಘಗಳು ಇದಕ್ಕೆ ಉದಾಹರಣೆ" (ಎಸ್. ಚಂದ್ರಶೇಖರ್, ೧೯೯೯: ೧೪೨–೧೪೩). ಜಾತಿಗೆ ಸಂಬಂಧಿಸಿದ ಪ್ರಜಾಪ್ರಭುತ್ವದ ಧೋರಣೆಗಳಿಗೆ ತಕ್ಕಂತೆ ಜಾತಿಯನ್ನು ಮುನ್ನೆಲೆಗೆ ತರಲು ಸಂಘಟನಾ ಪ್ರಕ್ರಿಯೆ ಮೂಲಕ ಪ್ರಯತ್ನಿಸಲಾಗುತ್ತಿದೆ. ಅಂದರೆ, ಪ್ರಾತಿನಿಧಿಕ ಪ್ರಭುತ್ವದಲ್ಲಿ ರಾಜಕೀಯ ವ್ಯವಸ್ಥೆಯೊಳಗೆ ವ್ಯಕ್ತಿಯನ್ನು ಗುರುತಿಸಲು ಜಾತಿಗಳನ್ನು ಮಾನದಂಡವನ್ನಾಗಿ ಬಳಸಿಕೊಳ್ಳಲು ಪ್ರಾರಂಭಿಸಲಾಯಿತು. ಅದಕ್ಕೆ ಪ್ರತಿಕ್ರಿಯೆಯಾಗಿ ಜಾತಿಗಳ ನಾಯಕರುಗಳು ಜಾತಿಗಳನ್ನು ಮುನ್ನೆಲೆಗೆ ತರಲು, ಸಂಘಟಿಸಲು ಹಾಗೂ ಅವುಗಳನ್ನು ಬಳಸಿಕೊಳ್ಳಲು ಪ್ರಾರಂಭಿಸಿದರು. ಇದರಿಂದ ಜಾತಿವ್ಯವಸ್ಥೆಯು ನಾಶವಾಗದೇ, ಜಾತಿಗಳ ನಡುವೆ ಸಂಘರ್ಷಗಳು ಪ್ರಾರಂಭವಾಗಿ ಅಭದ್ರತೆಗೆ ಕಾರಣವಾಗಿದೆ. ಇದಕ್ಕೆಲ್ಲಾ ಮುಖ್ಯ ಕಾರಣ ಜಾತಿಯಾಧಾರಿತ ರಾಜಕೀಯ ಗುರುತಿಸುವಿಕೆ ಎಂಬುದಾಗಿ ಲೇಖಕರು ವಾದಿಸಿದ್ದಾರೆ. ಚಂದ್ರಶೇಖರ್ ಭಟ್‌ರವರೂ ಸಹ ಜಾತಿವಾರು ರಾಜಕೀಯ ಗುರುತಿಸುವಿಕೆಯು ಜಾತಿಗಳ ಒಗ್ಗೂಡುವಿಕೆಗೆ ಕಾರಣವಾಯಿತು ಎಂಬುದನ್ನು ಹಿಂದುಳಿದ ವರ್ಗಗಳ ಚಳವಳಿಯ ಸಂದರ್ಭದ ಉದಾಹರಣೆಯ ಮೂಲಕ ಗುರುತಿಸುತ್ತಾರೆ (ಚಂದ್ರಶೇಖರ್ ಭಟ್, ೨೦೦೦: ೧೭೧).

## ೪ ಸಮಾರೋಪ:

ಜಾತಿಯಾಧಾರಿತವಾಗಿ ಪ್ರಾತಿನಿಧ್ಯ ನೀಡುತ್ತಿರುವುದು ಜಾತಿಸಂಘಟನೆಗಳ ರಚನೆಗೆ ಅಥವಾ ಜಾತಿಗಳನ್ನು ಬಲಗೊಳಿಸುವ ಪ್ರಕ್ರಿಯೆಗೆ ಕಾರಣವಾಗಿದೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಆದರೆ, ಜಾತಿಗಳ ಹಿತಾಸಕ್ತಿಯನ್ನು ಒಗ್ಗೂಡಿಸುವುದು ಅಥವಾ ಜಾತಿಗಳ ಉಪಗುಂಪುಗಳನ್ನೆಲ್ಲಾ ಸೇರಿಸಿ ಒಂದು ಪ್ರಬಲ ಜಾತಿಯನ್ನಾಗಿ ಸಂಘಟಿಸುವುದು ಜಾತಿವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಪ್ರಕ್ರಿಯೆಯ ಭಾಗವಾಗಿರಲು ಸಾಧ್ಯವಿಲ್ಲ. ಜಾತಿಯನ್ನು ಬಲಪಡಿಸಿದರೆ ಜಾತಿವಿನಾಶ ಮಾಡಿದ ಹಾಗಾಗುತ್ತದೆಯೆ? ಅಥವಾ ಜಾತಿ ವಿನಾಶವೆಂದರೆ ಜಾತಿಗಳನ್ನು ಸಂಘಟಿಸುವುದು ಎಂದರ್ಥವೆ? ಜಾತಿವಿನಾಶ ಮಾಡುವ ಉದ್ದೇಶವನ್ನು ಹೊಂದಿರುವ ಪ್ರಭುತ್ವವು ಜಾತಿಗಳನ್ನು ಗಟ್ಟಿಗೊಳಿಸಲು ಪ್ರೇರಣೆ ನೀಡುತ್ತಿರುವುದು ಇಲ್ಲಿ ಢಾಳಾಗಿ ಕಾಣುತ್ತದೆ. ಇದನ್ನು ಅನೇಕ ಚಿಂತಕರು ಗುರುತಿಸಿ, ಜಾತಿವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಉದ್ದೇಶವನ್ನು ಹೊಂದಿರುವ ಪ್ರಜಾಪ್ರಭುತ್ವದ ಧೋರಣೆಯು ಅದಕ್ಕೆ ವಿರುದ್ಧವಾಗಿ


Published by: Dr. Harisingh Gour University
CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College

ಪ್ರಭುತ್ವದ ಧೋರಣೆಗಳು ಜನರು ತಮ್ಮ ಜಾತಿಯ ಗುರುತನ್ನು ಗಟ್ಟಿಗೊಳಿಸಿಕೊಳ್ಳುವಂತೆ ಮಾಡುತ್ತಿವೆ. ಅಂದರೆ, ಜಾತಿನಿರ್ಮೂಲನೆ ಮಾಡಬೇಕಾಗಿರುವ ಪ್ರಜಾಪ್ರಭುತ್ವ ವ್ಯವಸ್ಥೆಯು ಜಾತಿಯನ್ನೇ ರಾಜಕೀಯಗೊಳಿಸುತ್ತಿದೆ ಎಂದು ಹಲವು ಚಿಂತಕರು ವಾದಿಸುತ್ತಾರೆ.

ರಜನಿ ಕೋಥಾರಿಯವರು ಪ್ರಜಾಪ್ರಭುತ್ವವು ಜಾತಿಯನ್ನು ರಾಜಕೀಯಗೊಳಿಸುತ್ತದೆ ಎಂಬುದನ್ನು ಹೀಗೆ ವಿವರಿಸಿದ್ದಾರೆ; "ವಾಸ್ತವದಲ್ಲಿ ಜಾತಿ ರಾಜಕೀಯದ ಚರ್ಚೆಗಳ ಪರಿಣಾಮವು ಅದು ಏನನ್ನು ಹೇಳುತ್ತದೆಯೋ ಅದಕ್ಕೆ ತದ್ವಿರುದ್ಧವಾಗಿದೆ. ಇದು ಜಾತಿ ಮುಕ್ತತೆಯನ್ನು ಪಡೆಯುವ ರಾಜಕೀಯವಾಗಿಲ್ಲ, ಬದಲಾಗಿ ಜಾತಿಯನ್ನೇ ರಾಜಕೀಯಗೊಳಿಸುತ್ತಿದೆ" (ರಜನಿ ಕೋಥಾರಿ, ೧೯೭೦: ೨೧–೨೧). ಕೋಥಾರಿಯವರ ವಾದವನ್ನು ಸಮರ್ಥಿಸುವಂತೆ ಸುರೀಂದರ್ ಜೋಡ್ಕರವರು ಈ ಮುಂದಿನಂತೆ ವಾದಿಸುತ್ತಾರೆ: "೧೯೬೦ರ ನಂತರ ಸಮಾಜಶಾಸ್ತ್ರಜ್ಞರು ಹಾಗೂ ರಾಜಕೀಯ ವಿಜ್ಞಾನಿಗಳು ಜಾತಿ ಮತ್ತು ರಾಜಕೀಯದ ನಡುವಿನ ಸಂಬಂಧದ ಕುರಿತು ಮಾತನಾಡಲು ಪ್ರಾರಂಭಿಸಿದರು. ಸಾಂಸ್ಥಿಕ ಪ್ರಜಾಪ್ರಭುತ್ವವು ನಿಧಾನವಾಗಿ ಜಾತಿ ಸಮೀಕರಣವನ್ನು ಬದಲಾಯಿಸಿತು. ಅಧಿಕಾರವು ಆಚರಣಾತ್ಮಕ ಮೇಲ್ಜಾತಿಗಳೆಂದು ಗುರುತಿಸಲಾದ ನಿರ್ದಿಷ್ಟ ಗುಂಪಿನಿಂದ ಮಧ್ಯಮ ವರ್ಗದ ಪ್ರಬಲ ಜಾತಿಗಳಿಗೆ ಹಸ್ತಾಂತರವಾಗುತ್ತಾ ಬಂದಿತು. ಪ್ರಜಾಪ್ರಭುತ್ವ ರಾಜಕೀಯವು ಸ್ಥಳೀಯ ಮಟ್ಟದ ಅಧಿಕಾರ ವಿಭಜನೆಯ ಪರಿಕಲ್ಪನೆಯನ್ನೂ ಪರಿಚಯಿಸಿತು. ಇದರಿಂದ ಅಧಿಕಾರ ಹಾಗೂ ಕಾರ್ಯಾತ್ಮಕ ಚಟುವಟಿಕೆಯಲ್ಲಿ ಬದಲಾವಣೆಗಳಾದವು. ಹಾಗೆಂದ ಮಾತ್ರಕ್ಕೆ ಅಧಿಕಾರದ ಪ್ರತ್ಯೇಕತೆಯು ಜಾತಿಯಿಂದ ಮುಕ್ತವಾಗಿರಲಿಲ್ಲ, ಅವುಗಳ ಸ್ವರೂಪವನ್ನು ಮಾತ್ರ ಬದಲಾಯಿಸಿತು. ಅಧಿಕಾರವು ಜಾತಿಗಳನ್ನು ಒಟ್ಟುಗೂಡಿಸುವ ಮೂಲಕ ಲಂಬ ಹಾಗೂ ಸಮತಲವಾಗಿ ಪುನರುತ್ಪಾದನೆ ಮಾಡುತ್ತಿದ್ದು, ಇದು ರಾಜಕೀಯದಲ್ಲಿ ಹೊಸ ವರ್ಗದ ಉದಯಕ್ಕೂ ಕಾರಣವಾಯಿತು" (ಸುರಿಂದರ್ ಜೋಡ್ಕ, ೨೦೧೨: ೫೯–೬೦).

ಜೋಡ್ಕರವರ ಪ್ರಕಾರ ಇದುವರೆಗೂ ಮೇಲ್ಜಾತಿಗಳ ಹಿಡಿತದಲ್ಲಿದ್ದ ಅಧಿಕಾರ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯಿಂದಾಗಿ ಇತರೆ ವರ್ಗಗಳಿಗೂ ಹಂಚಿಕೆಯಾಗುತ್ತಾ ಬಂದಿತು. ಏಕೆಂದರೆ, ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯು ಜಾತಿಗಳ ಗುರುತಿಸುವಿಕೆಯ ಮೂಲಕ ಜನರು ರಾಜಕೀಯದಲ್ಲಿ ಭಾಗವಹಿಸಲು ಅವಕಾಶಗಳನ್ನು ಕಲ್ಪಿಸಿಕೊಟ್ಟಿತು. ಇದರಿಂದ ರಾಜಕೀಯ ವಲಯದಲ್ಲಿ ಹೊಸ ವರ್ಗಗಳು ಉದಯವಾದವು. ಇದು ರಾಜಕೀಯದಲ್ಲಿ ಜಾತಿಗಳ ಒಟ್ಟುಗೂಡಿಸುವಿಕೆಗೆ ಚಾಲನೆ ನೀಡಿತು ಹಾಗೂ ಜಾತಿಗಳ ಭಾಗವಹಿಸುವಿಕೆಯ ಸ್ವರೂಪವೇ ಬದಲಾಯಿತು. ಅಷ್ಟೇ ಅಲ್ಲದೇ ಈ ರಾಜಕೀಯ ಭಾಗವಹಿಸುವಿಕೆಯೂ ಸಹ ಜಾತಿಗಳ ಶ್ರೇಣೀಕರಣವನ್ನು ಪುನರುತ್ಪಾದನೆ ಮಾಡುವ·ಕಾರ್ಯದಲ್ಲಿ ತೊಡಗಿಕೊಂಡಿದೆ. ಆದರೂ ಪ್ರಜಾಪ್ರಭುತ್ವವನ್ನು ಜಾತಿವ್ಯವಸ್ಥೆಯಿಂದಾದ ಶೋಷಣೆಗೆ ಪರಿಹಾರವೆಂಬಂತೆ ನೋಡಲಾಗುತ್ತದೆ. ಅಂದರೆ ಜಾತಿವ್ಯವಸ್ಥೆಯಿಂದಾಗಿ ಶತಮಾನಗಳಿಂದ ಅಧಿಕಾರ ವಂಚಿತರಾಗಿದ್ದ ಜಾತಿ ಸಮುದಾಯಗಳಿಗೆ ಪ್ರಜಾಪ್ರಭುತ್ವದಿಂದಾಗಿ ರಾಜಕೀಯ ಅಧಿಕಾರ ಪಡೆಯಲು ಹಾಗೂ ರಾಜಕೀಯದಲ್ಲಿ ಭಾಗವಹಿಸಲು ತಮ್ಮ ಹಿತಾಸಕ್ತಿಯನ್ನು ಒಟ್ಟುಗೂಡಿಸಲು ಸಾಧ್ಯವಾಯಿತು ಎಂಬುದನ್ನು ಇವರೇ ಈ ಮುಂದಿನಂತೆ ವಿವರಿಸುತ್ತಾರೆ: "ಮುಖ್ಯವಾದ ಸಂಗತಿಯೆಂದರೆ ಪ್ರಜಾಪ್ರಭುತ್ವವು ನಿಧಾನವಾಗಿ ಕೆಳಮುಖವಾಗಿ ಹರಡತೊಡಗಿದ್ದು. ೧೯೮೦ರ ವರೆಗೆ ಜಾತಿ ರಾಜಕೀಯವು ಬಹುಸಂಖ್ಯಾತರಾಗಿದ್ದವರಿಗೆ, ಕೃಷಿ ಭೂಮಿಯ ಒಡೆತನವನ್ನು ಹೊಂದಿರುವವರಿಗೆ ಹಾಗೂ ಪ್ರಾದೇಶಿಕ ಹಂತದಲ್ಲಿ ಪ್ರಬಲ ಜಾತಿ ಗುಂಪುಗಳಿಗೆ ಸೀಮಿತವಾಗಿತ್ತು. 'ಅಶುದ್ಧತೆಯ ರೇಖೆ'ಯ ಕೆಳಗಿರುವವರು ಹಾಗೂ ಹಿಂದೆ ಅಸ್ಪೃಶ್ಯರು ಎಂದು ಗುರುತಿಸಲ್ಪಟ್ಟ ಸಮುದಾಯಗಳು, ಪ್ರಜಾಪ್ರಭುತ್ವ ರಾಜಕೀಯದಲ್ಲಿ ಬಹುಶಃ ಅಲ್ಲಿಯವರೆಗೂ ಮೇಲ್ಜಾತಿಯವರೆಂದು ಕರೆಸಿಕೊಳ್ಳುವವರಿಂದ ಆಳಲ್ಪಡುತ್ತಿವೆ ಎಂದು ಹೇಳಲಾಗಿದ್ದ ರಾಷ್ಟ್ರೀಯ ಪಕ್ಷಗಳ ಮೂಲಕ ಭಾಗವಹಿಸುತ್ತಿದ್ದರು. ೧೯೮೦ರ ನಂತರ ಸಾಮಾಜಿಕ ಶೋಷಣೆಗೆ ಒಳಗಾದ ಸಮುದಾಯಗಳಿಂದ ಹೊಸ ನಾಯಕರು ಅಸ್ತಿತ್ವಕ್ಕೆ ಬಂದರು ಹಾಗೂ ಜಾತಿಗಳ ಹಿತಾಸಕ್ತಿಯಿಂದ ಅವುಗಳನ್ನು ಒಗ್ಗೂಡಿಸುವ ಕಾರ್ಯ ಪ್ರಾರಂಭವಾಯಿತು" (ಅದೇ, ೬೬). ಪ್ರಜಾಪ್ರಭುತ್ವದಿಂದ ಕೆಲವು ಜಾತಿಗಳಿಗೆ ರಾಜಕೀಯ ಭಾಗವಹಿಸಲು ಅವಕಾಶಗಳು ದೊರೆತವು ಎಂದರೆ, ಅದರಿಂದ ಆ ಜಾತಿಗಳ ಗುರುತು ನಾಶವಾಯಿತು ಅಥವಾ ನಾಶವಾಗುತ್ತದೆ ಎಂದರ್ಥವಲ್ಲ. ಏಕೆಂದರೆ, ಇದರ ಮೂಲಕ ಆ ಜಾತಿಗಳ ಹಿತಾಸಕ್ತಿಗಾಗಿ ಅವುಗಳನ್ನು ಒಗ್ಗೂಡಿಸುವ ಮೂಲಕ ಜಾತಿಯ ಬಲಪಡಿಸುವಿಕೆಯ



CO-ORDINATOR
IQAC
K.L.E.S' Arts & Commerce College

PRINCIPAL
K.L.E. Society's
Arts & Commerce College
GADAG-BETGERI-582101

ಜಾತಿವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಿದೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆದರೆ, ಏಕೆ ಪ್ರಜಾಪ್ರಭುತ್ವವು ಈ ರೀತಿಯ ಸಂದಿಗ್ಧತೆಯನ್ನು ಎದುರಿಸುತ್ತಿದೆ ಎನ್ನುವುದನ್ನು ವಿವರಿಸುವುದಿಲ್ಲ. ಹಾಗೆಯೇ ಜಾತಿ ಆಧಾರಿತ ಪ್ರಾತಿನಿಧ್ಯವನ್ನೂ ತಿರಸ್ಕರಿಸುವುದಿಲ್ಲ. ಬದಲಾಗಿ, 'ಸಂಪೂರ್ಣವಾಗಿ ಜಾತಿಗಳನ್ನು ಅಥವಾ ಜಾತಿವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಸಾಧ್ಯವಾಗುವುಲ್ಲ. ಹಾಗಾಗಿ, ಜಾತಿಗಳಿಗೆ ಪ್ರಾತಿನಿಧ್ಯ ನೀಡುವ ಮೂಲಕ ಅವುಗಳ ನಡುವಿನ ತಾರತಮ್ಯವನ್ನು ಹಿಂದುಳಿದಿರುವಿಕೆಯನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ. ಹಾಗಾಗಿ ಪ್ರಭುತ್ವವು ಹಿಂದುಳಿದ ಜಾತಿಗಳನ್ನು ಗುರುತಿಸಿ ಅವುಗಳಿಗೆ ವಿಶೇಷ ಮಾನ್ಯತೆ ನೀಡಬೇಕೆಂದು ಸಲಹೆ ನೀಡುತ್ತಾರೆ'; ಈ ನೆಲೆಯಲ್ಲಿ ಪ್ರಾತಿನಿಧಿಕ ವ್ಯವಸ್ಥೆಯಡಿಯಲ್ಲಿ ಜಾತಿಗಳನ್ನು ಗುರುತಿಸುವುದರಲ್ಲಿ ಹಿಂದುಳಿದ ಮತ್ತು ದಮನಿತ ಜಾತಿಗಳ ಗುರುತಿಸುವಿಕೆಯು ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ.

**ಆಧಾರ ಗ್ರಂಥಗಳು:**

1. Berreman D, Gerald. 1997. *Hindus of the Himalayas.* New Delhi: Oxford University Press.
2. Béteille, Andre. 1992. *The Backward Classes in Contemporary India*. New Delhi: Oxford University Press.
3. Bhat, Chandrashekar. 2008. 'Reform movement among the Waddars of Karnataka'. Social Movements in India. (Ed). M. S. A. Rao. New Delhi: Manohar Offset Press.
4. Dirks B, Nicholas. 2003. *Castes of Mind (Colonialism and the Making Modern India)*. New Jersey: Princeton University.
5. Dubois, Abbe. 2001. *Hindu Manners, Customs and Ceremonies*. New Delhi: Asian Education Services.
6. Dumont, Louis. 1998. *Homo Hierarchicus*. New Delhi: Oxford University Press.
7. Hutton, J. H. 1963. *Caste in India; Its Nature, Function, and Origins*. London: Oxford University Press.
8. Kothari, Rajani. 1970. *Caste in Indian Politics*. New Delhi: Orient Longman.
9. Risley, Herbert. 1915. *The People of India*. New Delhi : Asian Education Services.
10. Srinivas M. N. 2004. *Collected Essays.* New Delhi: Oxford University Press.
11. Surinder S, Jodhka. 2012. *Caste.* New Delhi: Oxford University Press.
12. Surinder.S. Jodhka.2011. '*Caste Politics*'. *Oxford Companion to Politics in India*. New Delhi: Oxford University Press.

೧೩. Thurston, Edgar. 2001. *Castes and Tribes of Southern India.* Vo-I. New Delhi : Asian Education Services.

೧೪. ಚಂದ್ರಶೇಖರ್, ಎಸ್. ೧೯೮೩. *ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ: ಕೆಲವು ಒಳನೋಟಗಳು (೧೮೮೧–೧೯೪೦)*. ಬೆಂಗಳೂರು: ಅಂಕಣ ಪ್ರಕಾಶನ.

೧೫. ಪಿ. ವಿ, ಶಿವಕುಮಾರ, ಈ, ವೀಣಾ ಮತ್ತು ಎ. ಷಣ್ಮುಖ. ೨೦೧೭. 'ಪ್ರಭುತ್ವ ಮತ್ತು ಅಸ್ಮಿತೆ ರಾಜಕೀಯ ಹಾಗೂ ಸಾಮಾಜಿಕ ಚಳವಳಿಗಳ ನಡುವಿನ ಸಂಬಂಧದ ಸ್ವರೂಪ'. *ಚಿಂತನಬಯಲು*. ದಕ್ಷಿಣ ಕನ್ನಡ. ಸಂಪುಟ–೫, ಸಂಚಿಕೆ–೩. ಪುಟ: –೨೪–೪೫.

೧೬. ಸದಾನಂದ, ಜೆ. ಎಸ್. ೧೯೯೨. 'ಮೀಸಲಾತಿ: ಒಂದು ಸಮೀಕ್ಷೆ'. *ಅರಿವು ಬರಹ*. ಕೊಣಾಜೆ (ದ.ಕ): ಅರಿವು ಬರಹ ಟ್ರಸ್ಟ್. ಸಂಚಿಕೆ–೨. ಪುಟ, ೩೬–೫೫.



CO-ORDINATOR
IQAC
K.L.E.S' Arts & Commerce College

PRINCIPAL
K.L.E. Society's
Arts & Commerce College
GADAG-BETGERI-582101